ಸಂಕುಚಿತಬುದ್ಧಿಗಳನ್ನು ಪ್ರದರ್ಶಿಸುತ್ತಾರೋ, ಅವರನ್ನು ಕಂಡು ಆಧ್ಯಾತ್ಮಿಕ ಜೀವನದ ಬಗ್ಗೆ ಶ್ರದ್ಧೆಯನ್ನೇ ಕಳೆದುಕೊಳ್ಳುವ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ಹಾಗಾಗಿ ನೈಜ ಆಧ್ಯಾತ್ಮಿಕ ಜೀವನದ ಸಾಧನೆಗೆ ಅವಕಾಶ ಕಡಮೆ ಎಂದೇ ತೋರುತ್ತದೆ.

ಶ್ರೀರಾಮಕೃಷ್ಣರು, 'ಭಾಗವತ, ಭಕ್ತ, ಭಗವಂತ ಒಂದೇ' ಎಂಬ ಉಪದೇಶದಂತಹ ಸಣ್ಣ ಸಣ್ಣ 'ವಿದ್ಯೆ'ಗಳನ್ನು ನೀಡಿರುವುದು ನಮಗಾಗಿಯೇ, ನಮ್ಮಂತಹ ಸಾಧಾರಣ ಜನರಿಗಾಗಿಯೇ. ನಾವು ಕೆಲಸಕಾರ್ಯಗಳಲ್ಲಿ ಮಗ್ನರಾಗಿರುವಾಗಲೂ ಇದರ ಚಿಂತನೆ ಮಾಡಬಹುದು. ಜೀವನದ ಈ ಸ್ತರದಲ್ಲಿ – ಸಾಮಾಜಿಕ ಏರುಪೇರುಗಳ ಸ್ತರದಲ್ಲಿ – ಈ ಮೂರೂ ಒಂದೇ ಎಂಬ ಚಿಂತನೆ ಬಹಳ ಉಪಯೋಗಕರವಾದುದು. ಅದು ಹೇಗೆ? ಈ ಮೂರೂ ಒಂದೇ ಆದರೆ 'ಎಲ್ಲವೂ ಒಂದೇ' ಎಂಬ ವಿವೇಕ ನಮ್ಮಲ್ಲಿ ಉತ್ಪನ್ನವಾಗ ಬಹುದು. ಆಗ ಸಣ್ಣತನ, ಸಂಕುಚಿತತೆ, ಹೀನಬುದ್ಧಿ ಇತ್ಯಾದಿಗಳನ್ನೇ ಬಂಡವಾಳವನ್ನಾಗಿ ಮಾಡಿಕೊಂಡ ಜನರನ್ನೂ ಸಹಾನುಭೂತಿಯಿಂದ ನೋಡಲು ನಮಗೆ ಸಾಧ್ಯವಾಗುತ್ತದೆ. ನಾವು ಹೇಗೆ ಭೇದವನ್ನು ನೋಡುತ್ತಿದ್ದವೋ, ಈ ಸಾಮಾನ್ಯ ಜನರು ಸಹ ಹಾಗೆಯೇ ಭೇದವನ್ನೇ ಕಾಣುತ್ತಿದ್ದಾರೆ, ಅಷ್ಟೆ ಎಂಬ ಸಿದ್ಧಾಂತಕ್ಕೆ ಆಗ ನಾವು ಬರುತ್ತೇವೆ. ಈ ಸಚ್ಚಿಂತನೆಯ ಪ್ರಭಾವದಿಂದ ಮನಸ್ಸು ಇನ್ನೂ ಉನ್ನತ ಸ್ತರಕ್ಕೆ ಏರಿದರೆ, ಆಗ ವಿಮಾನದಿಂದ ಗಿಡ, ಮರ ಕೊಳ, ನೆಲ – ಎಲ್ಲವೂ ಒಂದಾಗಿ ಕಾಣುವಂತೆ ನಾವು ಬೇರೆಯದೇ ಜಗತ್ತಿನಲ್ಲಿ ವಾಸಮಾಡಬಹುದು. **'ನಾ ನಿನ್ನ ಧ್ಯಾನದೊಳಿರಲು, ಮಿಕ್ಕ ಹೀನ ಮಾನವರೇನು ಮಾಡಬಲ್ಲರೋ'** ಮತ್ತು **'ನಗೆಯು ಬರುತಿದೆ ಎನಗೆ ನಗೆಯು ಬರುತಿದೆ, ಜಗದೊಳಿರುವ ಮನುಜರೆಲ್ಲ ಹಗರಣ ಮಾಡುವುದ ಕಂಡು ನಗೆಯು ಬರುತಿದೆ'** ಎಂದು ಪುರಂದರದಾಸರು ಹೇಳಿದಂತೆ ನಾವೂ ಹೇಳಿಕೊಳ್ಳಬಹುದು.

## ಕಮಲಿಯ ಕನ್ನಡಿ

"ಅಮ್ಮಾ, ನನಗೆ ನೀನು ಕೊಟ್ಟಿರುವ ಕನ್ನಡಿಯಲ್ಲಿ ಮುಖ ಸರಿಯಾಗಿ ಕಾಣುವುದಿಲ್ಲ!" ಎಂದಳು ಕಮಲಿ. ಅದಕ್ಕವಳ ತಾಯಿ, "ಕನ್ನಡಿಯನ್ನು ಚೆನ್ನಾಗಿ ಶುದ್ಧಮಾಡಿ ಇಟ್ಟುಕೋ. ಅದರ ಮೇಲೆ ಎಣ್ಣೆಯೂ ಧೂಳೂ ಬಿದ್ದು ಅದರ ಹೊಳಪನ್ನು ಮುಚ್ಚಿವೆ. ಬಟ್ಟೆಯಿಂದೊರೆಸಿ ಬಳಿಕ ನೋಡು. ಮುಖ ಚೆನ್ನಾಗಿ ಕಾಣಿಸುವುದು!" ಎಂದು ಹೇಳಿ, ತಾನೇ ಕನ್ನಡಿಯನ್ನೊರಸಿ ಮಗಳಿಗೆ ಕೊಟ್ಟಳು. ಕಮಲಿಯು ನಗುತ್ತಾ "ಹೌದು, ಹೌದು!" ಎಂದು ತನ್ನ ಮುದ್ದು ಮುಖವನ್ನು ಕನ್ನಡಿಯಲ್ಲಿ ನೋಡಿಕೊಳ್ಳುತ್ತಾ ತೃಪ್ತಿ ಹೊಂದಿದಳು. ಧ್ಯಾನದಲ್ಲಿ ಭಗವಂತನನ್ನು ಕಾಣುವ ರಹಸ್ಯವೂ ಇದೇ. ಮನಸ್ಸನ್ನು ನಿರ್ಮಲವಾಗಿಟ್ಟುಕೊಂಡರೆ ಅದರಲ್ಲಿ ದೇವರು ಕಾಣಿಸುವನು. ಆಸೆಯೆಂಬ ಹೊಲಸುಬಿದ್ದ ಮನಸ್ಸಿನಲ್ಲಿ ಆ ದಿವ್ಯಸ್ವರೂಪ ಪ್ರತಿಬಿಂಬಿಸುವುದಿಲ್ಲ. ಶ್ರೀರಾಮಕೃಷ್ಣರು ದೇವಿಯನ್ನು ಕಂಡು ಆನಂದ ಪ್ರವಾಹದಲ್ಲಿ ಮುಳುಗಿ ತೇಲಿದರು. ಅದಕ್ಕೆ ಕಾರಣ ಅವರ ಮನಸ್ಸಿನ ನೈರ್ಮಲ್ಯ. ಅವರು ಇತರರಿಗೆ ಮಾಡುವ ಉಪದೇಶವೂ ಇದೇ. ಈ ಉಪದೇಶವನ್ನು ನಾವೆಲ್ಲಾ ಅನುಸರಿಸಿ ಅದರ ಫಲವನ್ನು ಪಡೆಯಬಹುದು.

ಕೊಳದ ನೀರಿನಲ್ಲಿ ದಡದ ಮೇಲಿರುವ ಮರಗಿಡಗಳೂ ಆಕಾಶವೂ ಬೆಳಕೂ ಚೆನ್ನಾಗಿ ಕಾಣುತ್ತವೆ. ಗಾಳಿ ಬೀಸಿ ನೀರು ಚಲಿಸಿದರೆ ಇವು ಮರೆಯಾಗುತ್ತವೆ. ನಾವು ದೇವರನ್ನು ಕಾಣುವುದು ಹೀಗೆಯೇ. ಮನಸ್ಸನ್ನು ಆಸೆ ಮೋಹಗಳೆಂಬ ಪಾಚಿಯು ಮುಚ್ಚದ ಹಾಗೆ, ಕೋಪದ್ವೇಷಗಳೆಂಬ ಗಾಳಿಯು ಬೀಸಿ ಮನಸ್ಸನ್ನು ಕಲಕದ ಹಾಗೆ ನೋಡಿಕೊಂಡರೆ ಅದರಲ್ಲಿ ಭಗವಂತನ ತೇಜೋಮಯವಾದ ಸ್ವರೂಪವನ್ನು ಕಾಣಬಹುದು. ಪದೇ ಪದೇ ದ್ವೇಷ, ಅಸೂಯೆ, ಕೋಪಗಳ ಬಿರುಗಾಳಿಯೆದ್ದು ಬೀಸಿ ಮನಸ್ಸನ್ನು ಚಂಚಲಗೊಳಿಸುತ್ತಲೂ, ಆಸೆ ಅಹಂಕಾರಗಳೆಂಬ ಪಾಚಿ ಮನಸ್ಸನ್ನು ಎಡೆಬಿಡದೆ ಮುಚ್ಚಿಕೊಂಡೂ ಇದ್ದರೆ, ಅದರಲ್ಲಿ ದೇವರನ್ನು ಕಾಣುವುದು ಹೇಗೆ?

"ಚಿಕ್ಕ ಪುಟ್ಟ ವಿಷಯಗಳಲ್ಲಿಯ ಆಸೆಗಳನ್ನು ತೃಪ್ತಿಪಡಿಸಿಕೊಂಡು, ದೊಡ್ಡ ಆಸೆಗಳನ್ನೆಲ್ಲಾ ವಿವೇಕದ ಸಹಾಯದಿಂದ ಜಯಿಸಿ ದೂರಮಾಡಬೇಕು. ಪಡೆದ ವಿದ್ಯಾಭ್ಯಾಸವನ್ನೆಲ್ಲಾ ವಾದಕ್ಕೂ ಅಹಂಕಾರವನ್ನು ಬೆಳೆಸುವುದಕ್ಕೂ ಖರ್ಚು ಮಾಡದೆ ವಿವೇಕವನ್ನು ವೃದ್ಧಿಪಡಿಸಿಕೊಳ್ಳುವುದಕ್ಕೆ ಉಪಯೋಗಿಸಬೇಕು. ಆಸೆ ಮೋಹಗಳನ್ನೆಲ್ಲಾ ತ್ಯಜಿಸುವ ವಿವೇಕವನ್ನು ವಿದ್ಯಾಭ್ಯಾಸದಿಂದ ಪಡೆಯಬೇಕು. ಹಾಗೆ ಮಾಡಿದರೆ ಮನಸ್ಸು ನಿರ್ಮಲವಾದ ನೀರಿನಂತೆ ಸ್ವಚ್ಛವಾಗಿ ಭಗವಂತನ ಮುಖವನ್ನು ಪ್ರತಿಬಿಂಬಿಸುತ್ತದೆ." ಸಂಸಾರ ಜೀವನ ಒಂದು ಬಹಳ ಆಳವಾದ ಬಾವಿ. ಮಗುವು ಬಾವಿಯ ಹತ್ತಿರ ಹೋಗಿ ಇಣಿಕಿ ನೋಡಿದರೆ ನಾವು "ಅಯ್ಯೋ, ಇಲ್ಲಿ ನಿಲ್ಲಬೇಡ. ಇಣಿಕಿ ನೋಡಬೇಡ, ದೂರ ಬಾ!" ಎಂದು ಎಚ್ಚರಿಸುತ್ತೇವೆ. ಹಾಗೆಯೇ ಸಂಸಾರವೆಂಬ ಪಾತಾಳ ಬಾವಿಯೂ ಕೂಡ ಬಹಳ ಅಪಾಯಕರ. ಒಮ್ಮೆ ಈ ಬಾವಿಯಲ್ಲಿ ಬಿದ್ದರೆ ಪಾರಾಗುವುದು ಕಷ್ಟವೇ ಸರಿ.

ಲೋಭವೂ ಕೋಪವೂ ನಾವು ಎಷ್ಟೇ ಪ್ರಯತ್ನ ಮಾಡಿದರೂ ನಮ್ಮನ್ನು ಬಿಟ್ಟುಹೋಗುವುದಿಲ್ಲವಲ್ಲಾ! ಏನು ಮಾಡುವುದು?" "ಆಸೆ, ಚಿಂತೆ, ಕೋಪಗಳೆಲ್ಲಾ ಮನುಷ್ಯ ಸ್ವಭಾವದಲ್ಲಿ ಬೇರೂರಿ ನಿಂತಿವೆ. ಅದನ್ನು ಸರಿಯಾದ ಕಡೆ ತಿರುಗಿಸಿ ಇಟ್ಟುಕೊಳ್ಳಬೇಕು. ಪ್ರೇಯಸಿಯ ಮೇಲಿನ ಪ್ರೇಮವನ್ನೆಲ್ಲಾ ಪರಮಾತ್ಮನಲ್ಲಿಡು. ನಿನ್ನ ಆಸೆ ಶಕ್ತಿಗಳನ್ನೆಲ್ಲಾ ದೇವರನ್ನು ಪಡೆಯುವ ಪ್ರಯತ್ನದಲ್ಲಿ ಉಪಯೋಗಿಸು. ನಿನ್ನ ಕೋಪವನ್ನೂ ಸಹ ಭಗವಂತನ ಮೇಲೆ ತೋರಿಸು! ನನಗೇಕೆ ದರ್ಶನವನ್ನು ಕೊಡುವುದಿಲ್ಲ ಎಂದು ಆತನ ಮೇಲೆ ಕೋಪಿಸಿಕೊ. ಜನರ ಮೇಲೆ ನಿನಗುಂಟಾಗುವ ಆತುರ ಸಿಟ್ಟುಗಳನ್ನೆಲ್ಲಾ ಸರ್ವೇಶ್ವರನ ಮೇಲೆ ಸುರಿದು ತೀರಿಸಿಕೊ" ಎನ್ನುತ್ತಾರೆ ಪರಮಹಂಸರು. ಮನುಷ್ಯ ಸ್ವಭಾವವನ್ನು ಜಯಿಸುವ ಮಾರ್ಗವಿದು.

**(ಶ್ರೀರಾಮಕೃಷ್ಣ ಉಪನಿಷತ್, ಪು. ೮೭,೮೮)**


# ಭಗವತ್ಸಾಕ್ಷಾತ್ಕಾರವೇ ಮನುಷ್ಯ ಜೀವನದ ಉದ್ದೇಶ

ಸ್ವಾಮಿ ಅನುಪಮಾನಂದ

ಮನುಷ್ಯಜೀವನದ ಗುರಿ ಏನು ಎನ್ನುವ ಮೂಲಭೂತ ಪ್ರಶ್ನೆಗೆ 'ಭಗವತ್ಸಾಕ್ಷಾತ್ಕಾರ' ಎನ್ನುವ ಖಚಿತವಾದ ಉತ್ತರವನ್ನು ಶ್ರೀರಾಮಕೃಷ್ಣರು ನೀಡುತ್ತಾರೆ. ಅವರು ಬೋಧಿಸಿದ ಈ ಜೀವನಾದರ್ಶದ ಹಲವು ಆಯಾಮಗಳನ್ನು ಸರಳವಾಗಿ ತಿಳಿಸಿಕೊಟ್ಟಿರುವ ಸ್ವಾಮೀಜಿಯವರು ಹೈದರಾಬಾದಿನ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ಬರಹಗಾರರು ಮತ್ತು ಭಾಷಣಕಾರರೂ ಆದ ಸ್ವಾಮೀಜಿಯವರ ಹಲವು ಲೇಖನಗಳು ಈಗಾಗಲೇ 'ವಿವೇಕಪ್ರಭ' ಪತ್ರಿಕೆಯಲ್ಲಿ ಪ್ರಕಟವಾಗಿವೆ.

## ಆನಂದದ ಅನ್ವೇಷಣೆ

ಪ್ರತಿಯೊಬ್ಬ ಮನುಷ್ಯನೂ ಅಮಿತವಾದ ಆನಂದವನ್ನೂ ಮತ್ತು ಶಾಶ್ವತವಾದ ಶಾಂತಿಯನ್ನೂ ಹೊಂದಲು ಬಯಸುತ್ತಾನೆ. ಆದರೆ ಅದು ಎಲ್ಲಿ ಸಿಗುತ್ತದೆ ಮತ್ತು ಹೇಗೆ ಸಿಗುತ್ತದೆ ಎನ್ನುವುದೇ ದೊಡ್ಡ ಪ್ರಶ್ನೆ. ಕೆಲವರು ಅದನ್ನು ಅಧಿಕಾರದಲ್ಲಿ ಹುಡುಕುತ್ತಾರೆ. ಇನ್ನು ಕೆಲವರು ಅದನ್ನು ಆಸ್ತಿ–ಪಾಸ್ತಿಗಳಲ್ಲಿ ಹುಡುಕುತ್ತಾರೆ. ಮತ್ತೆ ಕೆಲವರು ಅದನ್ನು ಧನ–ಕನಕಗಳಲ್ಲಿ ಹುಡುಕುತ್ತಾರೆ. ಇನ್ನೂ ಕೆಲವರು ಅದನ್ನು ಹೆಸರು ಕೀರ್ತಿಗಳಲ್ಲಿ ಹುಡುಕುತ್ತಾರೆ. ಇವುಗಳ ಮೂಲಕ ಮನುಷ್ಯ ಕೆಲಕಾಲ ಮಾತ್ರವೇ ಸುಖ ಮತ್ತು ನೆಮ್ಮದಿಯನ್ನು ಪಡೆಯಬಲ್ಲ. ಇವು ಶಾಶ್ವತವಾದ ಶಾಂತಿಯನ್ನು ನೀಡಲಾರವು. ಏಕೆಂದರೆ ಇವುಗಳಿಗೆ ತಮ್ಮದೇ ಆದ ಇತಿ–ಮಿತಿಗಳಿವೆ. ಆದ್ದರಿಂದ ಅವು ಕೊಡುವ ಸುಖಕ್ಕೂ ಕೂಡ ಇತಿ–ಮಿತಿಗಳಿರುತ್ತವೆ. ಹುಟ್ಟು ಸಾವಿನಲ್ಲಿ ಪರ್ಯವಸಾನವಾಗುತ್ತವೆ, ಸುಖವು ದುಃಖದಲ್ಲಿ ಪರ್ಯವಸಾನವಾಗುತ್ತದೆ, ಪ್ರತಿಯೊಂದು ಸಂಯೋಗವೂ ವಿಯೋಗದಲ್ಲಿ ಪರ್ಯವಸಾನವಾಗುತ್ತದೆ. ಆದುದರಿಂದ ಇವೆಲ್ಲವೂ ನಶ್ವರವಾದುವು. ನಿಜವಾದ ಆನಂದ ಮತ್ತು ಮನಃಶಾಂತಿ ಸಿಗುವುದು ಆನಂದಸ್ವರೂಪನಾದ ಸಚ್ಚಿದಾನಂದನಲ್ಲಿ ಮಾತ್ರ. ಈ ವಿಚಾರವನ್ನು ಸಾವಿರಾರು ವರ್ಷಗಳ ಹಿಂದೆಯೇ ನಮ್ಮ ಪೂರ್ವಜರು ಕಂಡುಕೊಂಡರು. **ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಃ । ತೇಷಾಂ ಶಾಂತಿಃ ಶಾಶ್ವತೀ ನೇತರೇಷಾಮ್ ॥** ಎನ್ನುತ್ತದೆ ಕಠೋಪನಿಷತ್ತು. ಇದರರ್ಥ ತಮ್ಮಲ್ಲಿಯೇ ಅಂತರ್ನಿಹಿತವಾಗಿರುವ ಆತ್ಮನನ್ನು ಯಾವ ವಿವೇಕಿಗಳು ಅರಿಯುತ್ತಾರೋ ಅವರಿಗೆ ಮಾತ್ರವೇ ಶಾಶ್ವತವಾದ ಶಾಂತಿ ದೊರೆಯುತ್ತದೆಯೇ ಹೊರತು ಇತರರಿಗಲ್ಲ ಎಂದು. ಈ ಕಾರಣದಿಂದಲೇ ಯುಗಾವತಾರರಾದ ಶ್ರೀರಾಮಕೃಷ್ಣರು, "ಈ ಪ್ರಪಂಚಕ್ಕೆ ಬಂದ ನಾವು ಮೊದಲು ಭಗವಂತನ ಸಾಕ್ಷಾತ್ಕಾರಕ್ಕಾಗಿ ಪ್ರಯತ್ನ ಮಾಡಬೇಕು" ಎನ್ನುತ್ತಾರೆ. "ಮೊದಲು ದೇವರನ್ನು ಪಡೆಯಿರಿ. ಅನಂತರ ದ್ರವ್ಯವನ್ನು ಪಡೆಯಿರಿ. ಆದರೆ ಇದನ್ನು ತಲೆಕೆಳಗೆ ಮಾಡಬೇಡಿ" ಎಂದು ಉಪದೇಶಿಸುತ್ತಾರೆ.



## ಸರ್ವವ್ಯಾಪಿ ಭಗವಂತ

ಹಾಗಾದರೆ "ಭಗವಂತನು ಎಲ್ಲಿದ್ದಾನೆ ಮತ್ತು ಹೇಗಿದ್ದಾನೆ?" ಎನ್ನುವ ಪ್ರಶ್ನೆ ಬರುವುದು ಸ್ವಾಭಾವಿಕವೇ ಆಗಿದೆ. ಭಗವಂತ ಸರ್ವವ್ಯಾಪಿ. ತೈತ್ತಿರೀಯ ಉಪನಿಷತ್ತು ಹೇಳುತ್ತದೆ, **ಯತೋ ವಾ ಇಮಾನಿ ಭೂತಾನಿ ಜಾಯಂತೇ, ಯೇನ ಜಾತಾನಿ ಜೀವಂತಿ, ಯತ್ಪ್ರಯಂತ್ಯಭಿಸಂವಿಶಂತೀತಿ, ತದ್ವಿಜಿಜ್ಞಾಸಸ್ವ, ತದ್ ಬ್ರಹ್ಮೇತಿ** – ಅಂದರೆ "ಯಾವುದರಿಂದ ಈ ಜೀವಿಗಳೆಲ್ಲ ಹುಟ್ಟುತ್ತವೆಯೋ, ಯಾವುದರಲ್ಲಿ ಜೀವಿಗಳು ಬದುಕುತ್ತವೆಯೋ, ಕೊನೆಯಲ್ಲಿ ಅವೆಲ್ಲವೂ ಯಾವುದನ್ನು ಪ್ರವೇಶಿಸುತ್ತವೆಯೋ, ಅದನ್ನು ತಿಳಿ, ಅದುವೇ ಬ್ರಹ್ಮ." **ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ** – "ನಾನೇ ಎಲ್ಲದರ ಮೂಲವಾಗಿದ್ದೇನೆ ಮತ್ತು ಎಲ್ಲವೂ ನನ್ನಿಂದಲೇ ವಿಕಾಸಗೊಳ್ಳುತ್ತದೆ" ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣನೂ ಹೇಳುತ್ತಾನೆ. **"ಅಣುರೇಣು ತೃಣಕಾಷ್ಠ ಪರಿಪೂರ್ಣ ಗೋವಿಂದ"** ಎನ್ನುತ್ತಾರೆ ದಾಸವರೇಣ್ಯರಾದ ಪುರಂದರದಾಸರು. "ಮನುಷ್ಯರು ತಲೆದಿಂಬಿನ ಚೀಲಗಳಂತೆ. ಒಂದರ ಬಣ್ಣ ಕೆಂಪು, ಮತ್ತೊಂದು ನೀಲಿ, ಮೂರನೆಯದು ಕಪ್ಪು ಇರಬಹುದು. ಆದರೆ ಎಲ್ಲ ದಿಂಬುಗಳ ಒಳಗೂ ಒಂದೇ ಹತ್ತಿ ಇದೆ. ಇದರಂತೆಯೇ ಎಲ್ಲ ಮನುಷ್ಯರೂ ಕೂಡ. ಒಬ್ಬನು ಸುಂದರನಾಗಿರುವನು, ಮತ್ತೊಬ್ಬನು ಕಪ್ಪಾಗಿರುವನು. ಮೂರನೆಯವನು ಪುಣ್ಯಾತ್ಮನಾಗಿರಬಹುದು, ನಾಲ್ಕನೆಯವನು ದುರಾತ್ಮನಾಗಿರಬಹುದು. ಆದರೆ ಪರಮಾತ್ಮನು ಎಲ್ಲರಲ್ಲಿಯೂ ಇರುವನು" ಎನ್ನುತ್ತಾರೆ ಶ್ರೀರಾಮಕೃಷ್ಣರು. ಅವರು ತಮ್ಮ

ಅನುಭವವನ್ನು ಈ ರೀತಿಯಾಗಿ ವಿವರಿಸುತ್ತಾರೆ: "ನಾನು ಕಣ್ಣುಮುಚ್ಚಿ ಧ್ಯಾನ ಮಾಡುತ್ತಿದ್ದೆ. ಅನಂತರ ಹೀಗೆ ಭಾವಿಸಿದೆ, 'ಹೀಗೆ ಮಾಡಿದರೆ (ಕಣ್ಣುಮುಚ್ಚಿದರೆ) ಭಗವಂತನಿದ್ದಾನೆ. ಹೀಗೆ ಮಾಡಿದರೆ (ಕಣ್ಣುತೆರೆದರೆ) ಇಲ್ಲವೆ?' ಕಣ್ಣು ತೆರೆದಿದ್ದರೂ ಕೂಡ ಸರ್ವಭೂತಗಳಲ್ಲಿಯೂ ಭಗವಂತನಿರುವುದನ್ನು ನೋಡಿದ್ದೇನೆ. ಮನುಷ್ಯರಲ್ಲಿ, ಪ್ರಾಣಿಗಳಲ್ಲಿ, ಗಿಡಮರಗಳಲ್ಲಿ, ಸೂರ್ಯಚಂದ್ರರಲ್ಲಿ, ನೆಲದಲ್ಲಿ, ಜಲದಲ್ಲಿ ಸರ್ವಭೂತಗಳಲ್ಲಿಯೂ ಆತನೇ ಇದ್ದಾನೆ."

### ಭಗವಂತನ ದರ್ಶನ

ಭಗವಂತನು ಸರ್ವವ್ಯಾಪಿಯಾಗಿದ್ದರೆ ನಮಗೇಕೆ ಆತನು ಗೋಚರನಾಗುವುದಿಲ್ಲ ಎನ್ನುವ ಸಂದೇಹ ಸಹಜವಾದದ್ದು. "ರಾತ್ರಿಯ ಹೊತ್ತು ಗಗನದಲ್ಲಿ ಹಲವು ನಕ್ಷತ್ರಗಳು ಕಾಣಿಸುತ್ತವೆ. ಆದರೆ ಸೂರ್ಯೋದಯವಾದ ಮೇಲೆ ಅವು ಕಾಣುವುದಿಲ್ಲ. ಆದಕಾರಣ ಹಗಲಿನ ಆಕಾಶದಲ್ಲಿ ನಕ್ಷತ್ರಗಳು ಇಲ್ಲವೆನ್ನುವುದಕ್ಕೆ ಆಗುತ್ತದೆಯೇ? ಅದರಂತೆಯೇ ಎಲೈ ಮಾನವನೇ, ಅಜ್ಞಾನದಲ್ಲಿ ನೀನು ಇರುವ ತನಕ ದೇವರು ನಿನಗೆ ಕಾಣದೇ ಇದ್ದರೂ ದೇವರು ಇಲ್ಲವೆಂದು ನೀನು ಹೇಳಬಾರದು" ಎನ್ನುತ್ತಾರೆ ಶ್ರೀರಾಮಕೃಷ್ಣರು.

ಅಜ್ಞಾನದ ಪರದೆ ಸರಿದಾಗ ಭಗವಂತನ ಅಸ್ತಿತ್ವ ನಮ್ಮ ಅರಿವಿಗೆ ಬರುತ್ತದೆ. ಭಗವಂತನು ಈ ಜಗತ್ತನ್ನು ಬಹಳ ಚಿತ್ತಾಕರ್ಷಕವಾಗಿ ಸೃಷ್ಟಿಸಿದ್ದಾನೆ. ಈ ಆಕರ್ಷಣೆಯ ಕಾರಣದಿಂದಾಗಿ ಜೀವಿಗಳು ಸೃಷ್ಟಿಯಲ್ಲಿಯೇ ಮೈಮರೆತು ಸೃಷ್ಟಿಕರ್ತನಾದ ಭಗವಂತನ ಕಡೆಗೆ ಗಮನವನ್ನೇ ಕೊಡುವುದಿಲ್ಲ. ಇದಕ್ಕೆ ಶ್ರೀರಾಮಕೃಷ್ಣರು ಐಂದ್ರಜಾಲಿಕ ಮತ್ತು ಇಂದ್ರಜಾಲಗಳ ಉದಾಹರಣೆಯನ್ನು ಕೊಡುತ್ತಾರೆ. ಇಂದ್ರಜಾಲವನ್ನು ನೋಡುವಾಗ ನಮ್ಮ ಕಣ್ಣೆದುರು ಗಿಡ, ಮರ, ಪಕ್ಷಿಗಳು, ಕುದುರೆಗಳು, ಆನೆಗಳು – ಇವೆಲ್ಲವನ್ನೂ ನೋಡುತ್ತೇವೆ. ಇಂದ್ರಜಾಲವು ಕೇವಲ ಭ್ರಮೆ ಎನ್ನುವುದನ್ನು ಮರೆತುಬಿಡುತ್ತೇವೆ. ಇಂದ್ರಜಾಲವು ಮುಗಿದಾಗ ಕೇವಲ ಐಂದ್ರಜಾಲಿಕನೊಬ್ಬನೇ ಸತ್ಯ, ಇಂದ್ರಜಾಲವು ಆತನ ಸೃಷ್ಟಿ ಎಂದು ತಿಳಿಯುತ್ತದೆ. ಅದರಂತೆಯೆ ನಾವು ಈ ಪ್ರಪಂಚವೆಂಬ ಇಂದ್ರಜಾಲದಲ್ಲಿ ಮುಳುಗಿಹೋಗಿದ್ದೇವೆ. ಈ ಪ್ರಪಂಚವೆಂಬ ಇಂದ್ರಜಾಲದ ಭ್ರಮೆಯಿಂದ ಹೊರಬಂದಾಗಲೇ ಐಂದ್ರಜಾಲಿಕನಾದ ಭಗವಂತನನ್ನು ಅರಿಯಲು ಸಾಧ್ಯ.

ಈ ಪ್ರಪಂಚದ ವೈಶಿಷ್ಟ್ಯವೆಂದರೆ ಇದೊಂದು ಹಲಸಿನಹಣ್ಣಿನಂತೆ ಇದೆ. ಹಲಸಿನ ಹಣ್ಣನ್ನು ಬಿಡಿಸಲು ಪ್ರಯತ್ನಿಸಿದರೆ ಕೈಗೆ ಮೇಣ ಅಂಟಿಕೊಳ್ಳುತ್ತದೆ. ಅದರಂತೆಯೇ ಈ ಪ್ರಪಂಚವನ್ನು ಪ್ರವೇಶಿಸಿದ ವ್ಯಕ್ತಿ ಇದರ ಬಂಧನಕ್ಕೆ ಒಳಗಾಗುವುದು ಸಹಜ. ಅದರಿಂದ ಬಿಡಿಸಿ ಕೊಳ್ಳುವುದು ಕಷ್ಟ. ಮೇಣವು ಅಂಟಿಕೊಳ್ಳದಿರಲು ಕೈಗೆ ಎಣ್ಣೆಯನ್ನು ಸವರಿಕೊಂಡು ಹಲಸಿನಹಣ್ಣನ್ನು ಬಿಡಿಸಬೇಕು. ಆಗ ಮೇಣ ಕೈಗೆ ಅಂಟಿಕೊಳ್ಳುವುದಿಲ್ಲ. ಅದೇ ರೀತಿಯಾಗಿ ವಿವೇಚನೆ, ಇಂದ್ರಿಯನಿಗ್ರಹ, ಭಗವದ್ಭಕ್ತಿಗಳಂತಹ ಉನ್ನತ ಗುಣಗಳನ್ನು ಬೆಳೆಸಿಕೊಂಡರೆ, ಆಗ ಈ ಪ್ರಪಂಚದಲ್ಲಿದ್ದರೂ ಬಂಧಮುಕ್ತನಾಗಿ ಇರಲು ಸಾಧ್ಯವಾಗುತ್ತದೆ. ವಿವೇಕಿಯಾದ ಮನುಷ್ಯ ಇದನ್ನು ತಿಳಿದು ಈ ಪ್ರಪಂಚದ ಬಂಧನಕ್ಕೆ ಸಿಲುಕಿಕೊಳ್ಳದೆ ನಿರ್ಲಿಪ್ತನಾಗಿ ಇವುಗಳ ಹಿಂದಿರುವ ಸತ್ಯವನ್ನು ಅರಸುತ್ತಾನೆ. ಆದ್ದರಿಂದಲೇ ಸ್ವಾಮಿ ವಿವೇಕಾನಂದರು, "ಮನುಷ್ಯ ಜೀವನದ ಗುರಿ ಸುಖವಲ್ಲ, ಜ್ಞಾನವೇ ಮನುಷ್ಯ ಜೀವನದ ಗುರಿ" ಎನ್ನುತ್ತಾರೆ. ಈ ಗುರಿಯನ್ನು ಮರೆತು, ಪ್ರಾಪಂಚಿಕ ಸುಖಗಳಿಗೆ ಹಾತೊರೆದು ಮನುಷ್ಯನು ಅನೇಕ ರೀತಿಯ ಕಷ್ಟಗಳಿಗೆ ಈಡಾಗುತ್ತಾನೆ. ಶ್ರೀರಾಮಕೃಷ್ಣರು ಇದಕ್ಕೊಂದು ಉತ್ತಮವಾದ ಉದಾಹರಣೆಯನ್ನು ಕೊಡುತ್ತಾರೆ, "ದೊಡ್ಡ ಕಣಜಗಳ ಬಾಗಿಲ ಹತ್ತಿರ ಇಲಿಯನ್ನು ಹಿಡಿಯುವುದಕ್ಕಾಗಿ ಪುರಿಯನ್ನು ಒಳಗೆ ಹಾಕಿರುವ ಬಲೆಗಳಿರುತ್ತವೆ. ಇಲಿಗಳು ಪುರಿಯ ವಾಸನೆಗೆ ಮರುಳಾಗಿ ಕಣಜದ ಒಳಗಿರುವ ಇನ್ನೂ ಹೆಚ್ಚಿನ ದವಸವನ್ನು ಮರೆತು ಬಲೆಗೆ ಬೀಳುತ್ತವೆ. ಅವುಗಳೆಲ್ಲ ಅಲ್ಲಿ ಸಿಕ್ಕಿಹಾಕಿಕೊಂಡು ಸಾಯುತ್ತವೆ. ಇದರಂತೆಯೆ ಜೀವಿಗಳ ಪಾಡು ಕೂಡ. ಪ್ರಪಂಚದ ಲಕ್ಷಾಂತರ ಸುಖಗಳು ಘನೀಭೂತವಾಗಿ ಏಕವಾದಂತಿರುವ ಸಚ್ಚಿದಾನಂದದ ಎದುರಿಗೆ ಜೀವಿಯು ನಿಂತಿರುವನು. ಅಂತಹ ಪರಮಸುಖಕ್ಕೆ ಪ್ರಯತ್ನಪಡುವ ಬದಲು ಕೆಲಸಕ್ಕೆ ಬಾರದ ಇಂದ್ರಿಯಭೋಗಗಳಿಗೆ ಮರುಳಾಗಿ ಮಹಾಘೋರವಾದ ಮಾಯೆಯ ಬಲೆಗೆ ಬಿದ್ದು ಅವನು ಅಲ್ಲಿ ಸಾಯುತ್ತಾನೆ."

ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳದಿದ್ದರೆ ಮೋಕ್ಷವಿಲ್ಲ, ಅಂಥ ಜೀವಿಯು ಮತ್ತೆ ಮತ್ತೆ ಹುಟ್ಟಿಬರಬೇಕಾಗುತ್ತದೆ ಎನ್ನುತ್ತವೆ ಶಾಸ್ತ್ರಗಳು. ಹೇಗೆ ನಾವು ಹಳೆಯ ಬಟ್ಟೆಯನ್ನು ಬಿಸುಟು ಹೊಸ ಬಟ್ಟೆಯನ್ನು ಧರಿಸುತ್ತೇವೆಯೋ, ಅಂತೆಯೇ ಜೀವಿ ಕೂಡ ಜೀರ್ಣವಾದ ಶರೀರವನ್ನು ತ್ಯಜಿಸಿ ಹೊಸ ಶರೀರವನ್ನು ಹೊಂದುತ್ತಾನೆ. ವಿಷಯವಸ್ತುಗಳಲ್ಲಿ ಆಸಕ್ತಿಯನ್ನು ಹೊಂದಿರುವ ವ್ಯಕ್ತಿ ಮತ್ತೆ ಮತ್ತೆ ಹುಟ್ಟಿಬರಬೇಕಾಗುತ್ತದೆ. ಇದರಿಂದ ತಪ್ಪಿಸಿಕೊಳ್ಳಲು ಇರುವ ಏಕೈಕ ಉಪಾಯವೆಂದರೆ ಭಗವತ್ಸಾಕ್ಷಾತ್ಕಾರ. ಈ ವಿಷಯವನ್ನು ವಿಶದಪಡಿಸಲು ಶ್ರೀರಾಮಕೃಷ್ಣರು ಒಂದು ಸುಂದರವಾದ ಉಪಮಾನವನ್ನು ಕೊಡುತ್ತಿದ್ದರು: "ಕುಂಬಾರರು ಮಡಕೆಗಳನ್ನು ಬಿಸಿಲಿಗೆ ಇಡುತ್ತಾರೆ. ಹಸಿಯದು, ಬೆಂದದ್ದು – ಎರಡನ್ನೂ ಇಡುತ್ತಾರೆ. ಅಕಸ್ಮಾತ್ತಾಗಿ ದನಕರುಗಳು ಬಂದು ಅವನ್ನು ಒಮ್ಮೊಮ್ಮೆ ತುಳಿದುಬಿಡುತ್ತವೆ. ಬೆಂದ ಮಡಕೆಗಳು ಒಡೆದುಹೋಗಿದ್ದರೆ ಕುಂಬಾರರು ಅವನ್ನು ಬಿಸಾಡಿಬಿಡುತ್ತಾರೆ; ಆದರೆ ಹಸಿಯ ಮಡಕೆಗಳು ಒಡೆದುಹೋಗಿದ್ದರೆ ಅವನ್ನು ಮನೆಗೆ ತಂದು, ನೀರಿನಲ್ಲಿ ನೆನೆಹಾಕಿ ಮತ್ತೆ ಮುದ್ದೆಮಾಡಿ ಚಕ್ರದಲ್ಲಿಟ್ಟು ಹೊಸ ಮಡಕೆ ತಯಾರು ಮಾಡುತ್ತಾರೆ, ಬಿಸಾಡುವುದಿಲ್ಲ. ಅದಕ್ಕಾಗಿಯೇ ನಾನು ಕೇಶವನಿಗೆ ಹೇಳಿದೆ, 'ನೀನು ಎಲ್ಲಿಯವರೆಗೆ ಹಸಿಯಾಗಿರುವೆಯೋ ಅಲ್ಲಿಯವರೆಗೆ ಕುಂಬಾರನು ನಿನ್ನನ್ನು ಬಿಡಲಾರ. ಎಲ್ಲಿಯವರೆಗೆ ನೀನು ಜ್ಞಾನವನ್ನು ಪಡೆದುಕೊಳ್ಳುವುದಿಲ್ಲವೋ, ಎಲ್ಲಿಯವರೆಗೆ ನೀನು ಭಗವಂತನ ದರ್ಶನವನ್ನು ಪಡೆದುಕೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಕುಂಬಾರನು (ಭಗವಂತ) ಮತ್ತೆ ಮತ್ತೆ ನಿನ್ನನ್ನು ತನ್ನ

ಚಕ್ರಕ್ಕೆ ಹಾಕುತ್ತಲೇ ಇರುತ್ತಾನೆ, ಬಿಡುವುದಿಲ್ಲ. ಅಂದರೆ ಮತ್ತೆ ಮತ್ತೆ ಜನ್ಮವೆತ್ತಬೇಕಾಗುತ್ತದೆ. ತಪ್ಪಿಸಿಕೊಳ್ಳುವಂತೆಯೇ ಇಲ್ಲ. ಆತನ ಸಾಕ್ಷಾತ್ಕಾರವನ್ನು ಪಡೆದುಕೊಂಡುಬಿಟ್ಟರೆ, ಆಗ ಮುಕ್ತಿ ದೊರಕುತ್ತದೆ. ಆಗ ಕುಂಬಾರ (ಭಗವಂತ) ನಮ್ಮನ್ನು ಬಿಟ್ಟುಬಿಡುತ್ತಾನೆ.' "

ಭಗವತ್ಸಾಧನೆಗೆ ಅನೇಕ ಮಾರ್ಗಗಳಿವೆ. ಎಲ್ಲ ಮಾರ್ಗಗಳಿಂದಲೂ ಭಗವಂತನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳಬಹುದು. "ಯಾವ ರೀತಿಯಾಗಿ ನೀವೆಲ್ಲರೂ ಈ ಸ್ಥಳವನ್ನು ಬಂಡಿಯ ಮೂಲಕವೋ, ದೋಣಿಯ ಮೂಲಕವೋ, ಜಹಜಿನ ಮೂಲಕವೋ, ಕಾಲುನಡಿಗೆಯಿಂದಲೋ ಮುಟ್ಟಿದಿರೊ ಹಾಗೆ. ನೀವು ನಿಮ್ಮ ನಿಮ್ಮ ಅನುಕೂಲತೆ ಮತ್ತು ರುಚಿಗನುಸಾರವಾಗಿ ಈ ಸ್ಥಳಕ್ಕೆ ಬಂದು ತಲುಪಿದಿರಿ; ಆದರೆ ಎಲ್ಲರ ಉದ್ದೇಶವೂ ಒಂದೇ. ಕೆಲವರು ಮುಂಚೆ, ಇನ್ನು ಕೆಲವರು ಆಮೇಲೆ ಇಲ್ಲಿಗೆ ಬಂದು ಸೇರಿದಿರಿ; ಎಲ್ಲರೂ ಈ ಸ್ಥಳಕ್ಕೆ ಬಂದು ಸೇರಿದಿರಿ" ಎನ್ನುತ್ತಿದ್ದರು ಶ್ರೀರಾಮಕೃಷ್ಣರು. ಇದಕ್ಕೆ ಪೂರಕವಾಗಿಯೇ ಅವರು ಘೋಷಿಸಿದರು, "ಎಷ್ಟು ಮತಗಳೋ ಅಷ್ಟು ಪಥಗಳು" ಎಂದು.

## ಸತ್ಸಂಗ

ಸಾಧನೆಯಲ್ಲಿ ಮುನ್ನಡೆಯಲು **ಸತ್ಸಂಗ, ವ್ಯಾಕುಲತೆ, ಸರಳತೆ** ಮತ್ತು **ಸದಸದ್ವಸ್ತು ವಿಚಾರ** – ಇವು ಅವಶ್ಯಕ ಎನ್ನುತ್ತಾರೆ ಶ್ರೀರಾಮಕೃಷ್ಣರು. ಭಗವತ್ಸಾಧಕನಿಗೆ ಸತ್ಸಂಗ ಬಹಳ ಮುಖ್ಯ. ಏಕೆಂದರೆ, ನಮ್ಮ ಮನಸ್ಸಿನ ಸ್ವಭಾವ ಹೇಗಿದೆಯೆಂದರೆ, ಅದನ್ನು ಯಾವ ವಿಚಾರದ ಸಂಗದಲ್ಲಿ ಇಡುತ್ತೇವೋ, ಆ ವಿಚಾರದಿಂದ ಅದು ಪ್ರಭಾವಿತವಾಗುವುದು. ಬಣ್ಣವಿಲ್ಲದ ಗಾಜಿನ ಪಕ್ಕದಲ್ಲಿ ಒಂದು ಹೂವನ್ನು ಇಟ್ಟರೆ ಅದು ಆ ಹೂವಿನ ಬಣ್ಣವನ್ನು ಪಡೆಯುತ್ತದೆ. ಹೂವಿನ ಬಣ್ಣ ಕೆಂಪಾಗಿದ್ದರೆ, ಗಾಜಿನ ಬಣ್ಣವೂ ಕೂಡ ಕೆಂಪಾಗುತ್ತದೆ. ದುರ್ಜನರ ಸಂಗದಲ್ಲಿ ಇದ್ದರೆ ನಮಗೆ ತಿಳಿಯದೆಯೇ, ದುರ್ಗುಣಗಳೆಲ್ಲ ನಮ್ಮಲ್ಲಿ ಮನೆಮಾಡಿಬಿಡುತ್ತವೆ. ಪ್ರಪಂಚದಲ್ಲಿ ತನ್ನ ಕರ್ತವ್ಯಗಳಲ್ಲಿ ನಿರತನಾಗಿರುವ ಸಾಧಕನಲ್ಲಿ ಪ್ರಾಪಂಚಿಕತೆ ಸಹಜವಾಗಿಯೇ ಸೇರಿಕೊಂಡುಬಿಡುತ್ತದೆ. ಆ ಕಾರಣದಿಂದ ಸಾಧಕ ಭಗವಂತನನ್ನು ಮರೆತುಬಿಡುತ್ತಾನೆ. ಈ ಅಪಾಯದಿಂದ ಪಾರಾಗಲು ಇರುವ ಏಕೈಕ ಉಪಾಯವೆಂದರೆ ಸತ್ಸಂಗ. ಸತ್ಪುರುಷರ ಸಹವಾಸವನ್ನು ಮಾಡುತ್ತಿದ್ದರೆ ಮನಸ್ಸಿನಲ್ಲಿ ಉದಾತ್ತ ಸಂಸ್ಕಾರ ಉಂಟಾಗಿ ಭಗವನ್ಮಾರ್ಗದಲ್ಲಿ ಮುನ್ನಡೆಯಲು ನಮಗೆ ಸ್ಫೂರ್ತಿ ಸಿಗುತ್ತದೆ. ಕಾಶಿಗೆ ಹೋಗಬೇಕೆಂದರೆ ಕಾಶಿಯನ್ನು ನೋಡಿದ ವ್ಯಕ್ತಿಯಿಂದ ಮಾರ್ಗದರ್ಶನವನ್ನು ಪಡೆಯುವ ಹಾಗೆ, ಭಗವತ್ಕೃಪೆಯನ್ನು ಪಡೆದ ಸದ್ಗುರುವಿನ ಮಾರ್ಗದರ್ಶನವು ಆಧ್ಯಾತ್ಮಿಕ ಜೀವನಕ್ಕೆ ತುಂಬ ಅಗತ್ಯ.

## ವ್ಯಾಕುಲತೆ

"ವ್ಯಾಕುಲತೆಯೇ ಸರ್ವಸ್ವ. ಯಾವ ಮಾರ್ಗದಲ್ಲಿಯಾದರೂ ಹೋಗು – ನೀನು ಹಿಂದೂ, ಮುಸಲ್ಮಾನ, ಕ್ರೈಸ್ತ, ಶಾಕ್ತ, ಬ್ರಾಹ್ಮ ಯಾವುದು ಬೇಕಾದರೂ ಆಗಿರು – ನಿನಗೆ ಅವಶ್ಯಕವಾಗಿ ಬೇಕಾಗಿರುವುದು ವ್ಯಾಕುಲತೆ. ಆತ ನಮ್ಮ ಅಂತರ್ಯಾಮಿ. ವ್ಯಾಕುಲತೆಯೊಂದಿದ್ದರೆ ನಾವು ತಪ್ಪು ದಾರಿಯಲ್ಲಿ ನಡೆದರೂ ಚಿಂತೆಯಿಲ್ಲ, ಆತ ಮತ್ತೆ ನಮ್ಮನ್ನು ಒಳ್ಳೆಯ ಮಾರ್ಗಕ್ಕೆ ತಂದು ಸೇರಿಸಿಬಿಡುತ್ತಾನೆ...ಅರುಣೋದಯವಾದರೆ ಸಾಕು, ಪೂರ್ವ ದಿಕ್ಕು ಹೊಂಬಣ್ಣವಾಗುತ್ತದೆ. ಆಗ ಗೊತ್ತಾಗುತ್ತದೆ, ಸೂರ್ಯೋದಯಕ್ಕೆ ಇನ್ನು ಹೆಚ್ಚು ಸಮಯವಿಲ್ಲ ಎಂದು. ಅದೇ ರೀತಿ, ಯಾರಲ್ಲಿಯೇ ಆಗಲಿ, ಭಗವಂತನಿಗಾಗಿ ಅತ್ಯಂತ ಅಗಾಧವಾದ ವ್ಯಾಕುಲತೆ ಉಂಟಾಗಿರುವುದು ಕಂಡುಬಂದರೆ ಆಗ ಗೊತ್ತಾಗುತ್ತದೆ, ಆ ವ್ಯಕ್ತಿ ಭಗವಂತನ ಸಾಕ್ಷಾತ್ಕಾರಕ್ಕಾಗಿ ಇನ್ನು ಹೆಚ್ಚು ಕಾಲ ಕಾದಿರಬೇಕಾಗಿಲ್ಲ ಎಂದು" ಎನ್ನುತ್ತಿದ್ದರು ಶ್ರೀರಾಮಕೃಷ್ಣರು.

## ವಿವೇಕ–ವೈರಾಗ್ಯ

ಈ ಪ್ರಪಂಚಕ್ಕೆ ಬೆಲೆ ಬರುವುದೇ ಭಗವಂತನಿಂದ. ಒಂದು ಅಂಕೆಯನ್ನು ಬರೆದು ಅದರ ಮುಂದೆ ಸೊನ್ನೆಗಳನ್ನು ಇಡುತ್ತಾ ಹೋದರೆ ಅವುಗಳಿಗೆ ಬೆಲೆ ಇರುತ್ತದೆ. ಆದರೆ ಒಂದನ್ನು ಅಳಿಸಿಬಿಟ್ಟರೆ ಸೊನ್ನೆಗಳಿಗೆ ಯಾವ ಬೆಲೆಯೂ ಇರುವುದಿಲ್ಲ. ಸೊನ್ನೆಗಳಿಗೆ ಬೆಲೆ ಬರುವುದೇ ಅವುಗಳ ಹಿಂದಿರುವ ಒಂದರ ಅಂಕೆಯಿಂದ. ಭಗವಂತನೇ ಆ ಒಂದು. ಆತನನ್ನು ಪಡೆದರೆ ಮಾತ್ರವೇ ಸಂಪತ್ತು, ಆಸ್ತಿ, ಪದವಿ – ಎಲ್ಲಕ್ಕೂ ಬೆಲೆ ಬರುತ್ತದೆ. ಭಗವಂತನನ್ನು ಸಾಕ್ಷಾತ್ಕರಿಸಿಕೊಂಡ ಮಹಾತ್ಮರಿಗೆ ಈ ಪ್ರಪಂಚವೇ ನಂದನವನವಾಗುತ್ತದೆ. ಆದರೆ ಭಗವಂತನನ್ನು ಪಡೆಯುವುದು ಅಷ್ಟು ಸುಲಭವಲ್ಲ. ಅದಕ್ಕಾಗಿ ಸಾಧನೆ ಬೇಕು. ಹಾಲಿನಲ್ಲಿರುವ ಸಾರವಸ್ತು ಬೆಣ್ಣೆ. ಆದರೆ ಹಾಲನ್ನು ನೀರಿಗೆ ಹಾಕಿದರೆ ಅದು ನೀರಿನೊಡನೆ ಬೆರೆತುಹೋಗಿಬಿಡುತ್ತದೆ. ಅದರಿಂದ ಬೆಣ್ಣೆ ಸಿಗುವುದಿಲ್ಲ. ಹಾಲನ್ನು ಹೆಪ್ಪು ಹಾಕಿ ಮೊಸರು ಮಾಡಿ, ಮೊಸರನ್ನು ಕಡೆದಾಗ ಮಾತ್ರ ಬೆಣ್ಣೆ ಸಿಗುತ್ತದೆ. ಈಗ ಬೆಣ್ಣೆಯನ್ನು ನೀರಿನಲ್ಲಿಟ್ಟರೆ ಅದು ನೀರಿನೊಡನೆ ಬೆರೆತು ಹೋಗುವುದಿಲ್ಲ, ತೇಲುತ್ತದೆ. ಅದೇ ರೀತಿಯಾಗಿ ಸಂಸಾರದ ಸಾರವಸ್ತುವಾದ ಭಗವಂತನನ್ನು ಮೊದಲು ಪಡೆದು, ನಂತರ ಸಂಸಾರದಲ್ಲಿದ್ದರೆ ಭಯವಿಲ್ಲ. ಒಮ್ಮೆ ಸಂಸಾರದಲ್ಲಿ ಇಳಿದರೆ ವ್ಯಕ್ತಿ ಅದರಲ್ಲಿ ಮುಳುಗಿಬಿಡುತ್ತಾನೆ. ಅನಂತರ ಭಗವಂತನನ್ನು ಪಡೆಯುತ್ತೇನೆಂದರೆ ಅದು ಬಹಳ ಕಷ್ಟ. ಸಾರವಾದ ಭಗವಂತನನ್ನು ಪಡೆಯದಿದ್ದರೆ ಸಂಸಾರವು ನಿಸ್ಸಾರವಾಗುತ್ತದೆ. ಹಾಲು ನೀರಿನೊಂದಿಗೆ ಬೆರೆತುಹೋಗಿಬಿಡುವಂತೆ ಒಮ್ಮೆ ಪ್ರಾಪಂಚಿಕತೆ ಮನಸ್ಸಿನೊಳಗೆ ಪ್ರವೇಶಿಸಿದರೆ ಆ ವ್ಯಕ್ತಿಯ ಕಥೆ ಮುಗಿದಂತೆ. ಈ ಪ್ರಪಂಚದಲ್ಲಿ ಅನೇಕ ರೀತಿಯ ಪ್ರಲೋಭನೆಗಳಿವೆ. ಕುಟುಂಬ, ಅಧಿಕಾರ, ಆಸ್ತಿ–ಪಾಸ್ತಿ, ಯಶಸ್ಸು, ಕೀರ್ತಿ ಮುಂತಾದವುಗಳಲ್ಲೇ ಮುಳುಗಿ ಮನುಷ್ಯನ